**DW.**7

**ದಿನಾಂಕಃ 04-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀಎಸ್.ಎ.ಕೆ. ವಕೀಲರಿಂದಃ**

1. ಈ ಕೇಸಿನ ಪ್ರತಿವಾದಿ ನಂಬರ 4 ಮತ್ತು 7(ಎ) ರವರನ್ನು ಹೊರತು ಪಡಿಸಿ, ಉಳಿದ ಪ್ರತಿವಾದಿಗಳ ಪ್ರತಿವಾದ ಒಂದೇ ಆಗಿರುತ್ತದೆ ಎಂದರೆ ಸರಿ. ಈ ಕೇಸಿನಲ್ಲಿ ಪ್ರತಿವಾದ ಪತ್ರವನ್ನು ನಾನೇ ಹಾಕಿರುತ್ತೇನೆ. ಸದರಿ ಪ್ರತಿವಾದ ಪತ್ರದಲ್ಲಿ ಏನು ಬರೆಸಿದ್ದೇನೆ ಎಂದು ನನಗೆ ಗೊತ್ತಿರುತ್ತದೆ. ನನ್ನ ಪ್ರತಿವಾದ ಪತ್ರದಲ್ಲಿ ರಾಣೆಬೆನ್ನೂರಿನಲ್ಲಿದ್ದ ಒಂದು ಸೈಟನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಧಾರವಾಡದ ಕೆಐಎಡಿಬಿ ಲೇಔಟನಲ್ಲಿ 4 ನೇ ಪ್ರತಿವಾದಿಯ ಹೆಸರಿಗೆ ಒಂದು ಸೈಟನ್ನು ಖರೀದಿಸಿರುತ್ತೇವೆ, ಆದ್ದರಿಂದ ಅದರಲ್ಲಿಯೂ ಸಹಾ ನಮಗೆ ಹಕ್ಕು ಇದೆ ಎಂದು ಹೇಳಿರುತ್ತೇನೆ. ಸದರಿ ಸೈಟ್ ಖರೀದಿಗೆ ನಾವೂ ಸಹಾ ಹಣ ಕೊಟ್ಟಿರುತ್ತೇವೆ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇವೆ. ಆ ರೀತಿ 6 ನೇ ಪ್ರತಿವಾದಿಯವರು ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

2. ರಾಣೆಬೆನ್ನೂರಿನಲ್ಲಿದ್ದ ಸೈಟನ್ನು ಬಸವನಗೌಡ ಹಿತ್ತಲಮನಿ ಎಂಬುವವರಿಂದ 4 ನೇ ಪ್ರತಿವಾದಿಯವರ ಹೆಸರಿಗೆ ಖರೀದಿ ಮಾಡಿದ್ದೇವು. ಸದರಿ ಸೈಟಿನ ಸರ್ವೇ ನಂಬರ 8 ಆಗಿದ್ದು, ಪ್ಲಾಟ ನಂಬರ 17 ಆಗಿರುತ್ತದೆ. ಸದರಿ ಸೈಟನ್ನು 2004 ರಲ್ಲಿ ರೂ.1,65,000/- ಗೆ 4 ನೇ ಪ್ರತಿವಾದಿಯವರ ಹೆಸರಿಗೆ ಖರೀದಿಸಿರುತ್ತೇವೆ. ಸದರಿ ಸೈಟನ್ನು 2010-11 ರಲ್ಲಿ 4 ನೇ ಪ್ರತಿವಾದಿಯವರು ಮಹಾದೇವಗೌಡ ಬಾಳನಗೌಡ್ರ ಇವರಿಗೆ ರೂ.9,25,000/- ಗೆ ಮಾರಾಟ ಮಾಡಿರುತ್ತಾರೆ. ಸದರಿ ಹಣವನ್ನು ಧಾರವಾಡದಲ್ಲಿ ಸೈಟು ಖರೀದಿಗೆ ವಿನಿಯೋಗಿಸಿರುತ್ತೇವೆ. ಧಾರವಾಡದ ಸೈಟನ್ನು ಕೂನರೆಡ್ಡಿ ಎನ್ನುವವರಿಂದ 4 ನೇ ಪ್ರತಿವಾದಿಯು ರೂ.8 ಲಕ್ಷ ಚಿಲ್ಲರೆ ಹಣಕ್ಕೆ 2010-11 ರಲ್ಲಿ ಖರೀದಿಸಿರುತ್ತಾರೆ. ಧಾರವಾಡದ ಸೈಟು ಖಾಲಿ ನಿವೇಶನವಾಗಿತ್ತು. ಸದರಿ ಸೈಟು ಖರೀದಿಯ ಸಮಯದಲ್ಲಿ 4 ನೇ ಪ್ರತಿವಾದಿಯವರು ಇಂಜನೀಯರಾಗಿ ಕೆಲಸ ಮಾಡುತ್ತಿದ್ದರು. 1998-99 ರಿಂದ 4 ನೇ ಪ್ರತಿವಾದಿಯವರು ಇಂಜನೀಯರಾಗಿ ಕೆಲಸ ಮಾಡುತ್ತಿದ್ದರು. 4 ನೇ ಪ್ರತಿವಾದಿಯವರು

ಸದರಿ ಸೈಟು ಖರೀದಿಸಲು ಲೋನ ಮಾಡಿರುವುದಿಲ್ಲ. ದಾವಾ ಶೆಡ್ಯೂಲ್ ಐಟೆಂ ನಂಬರ-6 ರ ಆಸ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ. 2013-14 ರಲ್ಲಿ 4 ನೇ ಪ್ರತಿವಾದಿಯವರು ಮನೆಯನ್ನು ಕಟ್ಟಿಸಿರುತ್ತಾರೆ. ಸದರಿ ಮನೆ ಕಟ್ಟಿಸಲು 4 ನೇ ಪ್ರತಿವಾದಿಯವರು ಯಾವುದೇ ಬ್ಯಾಂಕಿನಲ್ಲಿ ಲೋನ ಮಾಡಿರುವುದಿಲ್ಲ. 4 ನೇ ಪ್ರತಿವಾದಿಯವರು ದಾವಾ ಶೆಡ್ಯೂಲ್ ಐಟೆಂ ನಂಬರ-6 ಆಸ್ತಿಯನ್ನು ಖರೀದಿ ಮಾಡಲು ಮತ್ತು ಮನೆಯನ್ನು ಕಟ್ಟಲು ಎಸ್.ಬಿ.ಐ ಬ್ಯಾಂಕ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಲೋನ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯವರು ಸೈಟು ಖರೀದಿಗೆ ಎಸ ಬಿಐ ಹುಬ್ಬಳ್ಳಿಯಿಂದ ರೂ.6,90,000/- ಸಾಲ ಪಡೆದು ಸೈಟು ಮಾರಾಟ ಮಾಡಿದ್ದ ಕೊನರೆಡ್ಡಿಯವರಿಗೆ ರೂ.7,80,000/- ವನ್ನು ಚೆಕ್ಕ ಮೂಲಕ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.